# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 892 (1020) |
| ಸದಸ್ಯರ ಹೆಸರು | ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25.07.2024 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಕ್ರಮ |
|---|---|---|
| ಅ | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಸ್ತುತ ಖಾಲಿಯಿರುವ ಕೆ.ಎ.ಎಸ್, ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು ಮಾಹಿತಿ ಒದಗಿಸುವುದು) | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಸ್ತುತ ಒಟ್ಟು 384 ಕೆಎಎಸ್, ಗೆಜೆಟೆಡ್ ಪ್ರೊಬೇಷನರಿ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳು ಖಾಲಿಯಿದ್ದು, ಇಲಾಖಾವಾರು ಮತ್ತು ಹುದ್ದೆವಾರು ಮಾಹಿತಿಯನ್ನು **ಅನುಬಂಧದಲ್ಲಿ** ರಲ್ಲಿ ನೀಡಿದೆ. |
| ಆ | ವಿವಿಧ ಇಲಾಖೆಗಳಲ್ಲಿ ಕೆ.ಎ.ಎಸ್ ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ಭರ್ತಿ ಮಾಡಲು ಲೋಕಸೇವಾ ಆಯೋಗಕ್ಕೆ ಸಲ್ಲಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು 384 ಗೆಜೆಟೆಡ್ ಪ್ರೊಬೇಷನರ್ಸ್ (ಕೆಎಎಸ್) ಹುದ್ದೆಗಳನ್ನು 2023-24ನೇ ಸಾಲಿಗೆ ಭರ್ತಿ ಮಾಡುವಂತೆ ದಿನಾಂಕ:02.02.2024 ರಂದು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. |
| ಇ | 2022-2023 ಮತ್ತು 2024ನೇ ಸಾಲಿನಲ್ಲಿ ಕೆಎಎಸ್ ಪರೀಕ್ಷೆಗಳನ್ನು ನಡೆಸುವುದರ ಬಗ್ಗೆ ಸರ್ಕಾರದ ತೀರ್ಮಾನವೇನು: ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ನಡೆಸಲಾಗುವುದು? (ಪೂರ್ಣ ಮಾಹಿತಿ ನೀಡುವುದು); | ಆಯೋಗವು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ 384 ಹುದ್ದೆಗಳ ಅಧಿಸೂಚನೆಯನ್ನು ದಿನಾಂಕ: 26-02-2024ರಂದು ಹೊರಡಿಸಿ, ದಿನಾಂಕ: 05-05-2024ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲು ವೇಳಾಪಟ್ಟಿಯನ್ನು ನಿಗದಿಪಡಿಸಿತ್ತು. ಆದರೆ ಲೋಕ ಸಭೆಗೆ ರಾಜ್ಯದ 14 ಕ್ಷೇತ್ರಗಳಿಗೆ ದಿನಾಂಕ: 07-05-2024ರಂದು ಚುನಾವಣಾ ನಿಗದಿಯಾಗಿದ್ದರಿಂದ ಸದರಿ ಪರೀಕ್ಷೆಯ ದಿನಾಂಕವನ್ನು ಮುಂದೂಡಿ ದಿನಾಂಕ:21-07-2024ರಂದು ನಡೆಸಲು ವೇಳಾಪಟ್ಟಿಯನ್ನು ಮರುನಿಗದಿಪಡಿಸಲಾಗಿತ್ತು.<br><br>ತದನಂತರ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 44 ಎಸ್‌ಎಸ್‌ಸಿ 2024, ದಿನಾಂಕ:21-06-2024ರಲ್ಲಿ 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ ಎಲ್ಲಾ ಅಭ್ಯರ್ಥಿಗಳಿಗೆ ವಯಸ್ಸಿನ ನಿರ್ಬಂಧವಿಲ್ಲದೆ ಒಂದು ಬಾರಿಗೆ ಸೀಮಿತಗೊಳಿಸಿ (one time measure) ಅರ್ಜಿ ಸಲ್ಲಿಸಲು ಹೆಚ್ಚುವರಿ ವಿಶೇಷ ಅವಕಾಶವನ್ನು ನೀಡುವಂತೆ ಆದೇಶಿಸಿದ್ದು, |

| | | |
|---|---|---|
| | | ಅದರಂತೆ 2017-18ನೇ ಸಾಲಿನ ನೇಮಕಾತಿಯ ಅಭ್ಯರ್ಥಿಗಳು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ದಿನಾಂಕ:06-07-2024 ರಿಂದ 21-07-2024 ರವರೆಗೆ 15 ದಿನಗಳ ಕಾಲಾವಕಾಶವನ್ನು ನೀಡಲಾದ ಹಿನ್ನೆಲೆಯಲ್ಲಿ ಸದರಿ ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ:25-08-2024ರಂದು ನಡೆಸಲು ಮತ್ತೊಮ್ಮೆ ಮರುನಿಗದಿಪಡಿಸಲಾಗಿರುತ್ತದೆ.<br><br>ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಯನ್ನು ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯನ್ನೊಳಗೊಂಡಂತೆ ಮೂರು ಹಂತಗಳಲ್ಲಿ ನಡೆಸಲಾಗುತ್ತದೆ. ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ) ನಿಯಮಗಳು, 1997ರನ್ವಯ ಅಧಿಸೂಚನೆ ಹೊರಡಿಸಿದ ಒಂದು ವರ್ಷದೊಳಗೆ ನೇಮಕಾತಿಯನ್ನು ಪೂರ್ಣಗೊಳಿಸಲು ಸರ್ಕಾರದ ನಿರ್ದೇಶನವಿರುತ್ತದೆ. ಸದರಿ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯನ್ನು ಮೊದಲನೆ ಬಾರಿ ಚುನಾವಣಾ ದಿನಾಂಕ ಮತ್ತು ಪರೀಕ್ಷಾ ದಿನಾಂಕವು ನಿಕಟವಾಗಿ ನಿಗದಿಯಾಗಿದ್ದರಿಂದ ಮತ್ತು ಎರಡನೆ ಬಾರಿ ಸರ್ಕಾರದ ಆದೇಶದಂತೆ ಮುಂದೂಡಲಾಗಿದ್ದರೂ ನಿಯಮಾನುಸಾರ ಆದ್ಯತೆಯ ಮೇರೆಗೆ ನಿಗದಿತ ಕಾಲಾವಧಿಯೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಸಿಆಸುಇ 107 ಎಸ್ಎಸ್‌ಸಿ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ

## (ಗ್ರೂಪ್ – ಎ ಹುದ್ದೆಗಳು)
## (Group – A posts)

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 |
|---|---|---|---|
| 01 | ಸಿಆಸುಇ | ಸಹಾಯಕ ಆಯುಕ್ತರು (ಕಿರಿಯ ಶ್ರೇಣಿ) | 40 |
| 02 | ವಾಣಿಜ್ಯ ತೆರಿಗೆ ಇಲಾಖೆ | ಸಹಾಯಕ ಆಯುಕ್ತರು | 41 |
| 03 | ಖಜಾನೆ ಇಲಾಖೆ | ಸಹಾಯಕ ನಿರ್ದೇಶಕರು | 2 |
| 04 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ | 40 |
| 05 | ಒಳಾಡಳಿತ ಇಲಾಖೆ | ಡಿವೈಎಸ್‌ಪಿ | 9 |
| 06 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು | 20 |
| 07 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ | 7 |
| | **ಒಟ್ಟು ಹುದ್ದೆಗಳು** | | **159** |

## (ಗ್ರೂಪ್ – ಬಿ ಹುದ್ದೆಗಳು)
## (Group – B posts)

| ಕ್ರ.ಸಂ | ಇಲಾಖೆ | ಹುದ್ದೆಗಳು | 2023-24 |
|---|---|---|---|
| 01 | ಕಂದಾಯ ಇಲಾಖೆ | ತಹಶೀಲ್ದಾರ್ ಗ್ರೇಡ್-2 | 51 |
| 02 | ವಾಣಿಜ್ಯ ತೆರಿಗೆ ಇಲಾಖೆ | ವಾಣಿಜ್ಯ ತೆರಿಗೆ ಅಧಿಕಾರಿ | 59 |
| 03 | ಕಾರ್ಮಿಕ ಇಲಾಖೆ | ಕಾರ್ಮಿಕ ಅಧಿಕಾರಿ | 4 |
| 04 | ಒಳಾಡಳಿತ ಇಲಾಖೆ (ಕಾರಾಗೃಹ) | ಸಹಾಯಕ ಅಧೀಕ್ಷಕರು | 3 |
| 05 | ಸಹಕಾರ ಇಲಾಖೆ | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 12 |
| 06 | ಸಹಕಾರ ಇಲಾಖೆ | ಲೆಕ್ಕಪರಿಶೋಧನೆ ಸಹಾಯಕ ನಿರ್ದೇಶಕರು | 9 |
| 07 | ಆರ್ಥಿಕ ಇಲಾಖೆ (ಅಬಕಾರಿ) | ಅಬಕಾರಿ ಉಪಅಧೀಕ್ಷಕರು | 10 |
| 08 | ಕೌಶಲ್ಯಾಭಿವೃದ್ಧಿ ಇಲಾಖೆ | ಉದ್ಯೋಗಾಧಿಕಾರಿ | 3 |
| 09 | ಯುವ ಸಬಲೀಕರಣ & ಕ್ರೀಡಾ ಇಲಾಖೆ | ಸಹಾಯಕ ನಿರ್ದೇಶಕರು | 4 |
| 10 | ನಗರಾಭಿವೃದ್ಧಿ ಇಲಾಖೆ | ಮುಖ್ಯಾಧಿಕಾರಿ ಗ್ರೇಡ್-1 | 1 |
| 11 | ಆರ್ಥಿಕ ಇಲಾಖೆ (ಖಜಾನೆ) | ಸಹಾಯಕ ಖಜಾನಾಧಿಕಾರಿ | 46 |
| 12 | ಆಹಾರ ನಾಗರೀಕ ಸರಬರಾಜು ಇಲಾಖೆ | ಸಹಾಯಕ ನಿರ್ದೇಶಕರು | 9 |
| 13 | ಪ್ರವಾಸೋದ್ಯಮ ಇಲಾಖೆ | ಸಹಾಯಕ ನಿರ್ದೇಶಕರು | 2 |
| 14 | ಸಿಆಸುಇ (ಸಿಬ್ಬಂದಿ) | ಶಾಖಾಧಿಕಾರಿ | 5 |
| 15 | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು ಗ್ರೇಡ್-2 | 7 |
| | **ಒಟ್ಟು ಹುದ್ದೆಗಳು** | | **225** |